# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1061

ಸದಸ್ಯರ ಹೆಸರು : ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 18.12.2024

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಯಚೂರು ಜಿಲ್ಲೆ, ಲಿಂಗಸೂರು ತಾಲ್ಲೂಕಿನ ಹಟ್ಟಿ ಚಿನ್ನದ ಗಣಿ ಹಾಗೂ ಹಟ್ಟಿ ಪಟ್ಟಣದಿಂದ ಲಿಂಗಸೂರು, ಧಾರವಾಡ, ಹುಬ್ಬಳ್ಳಿ ಹಾಗೂ ಇನ್ನೂ ಮುಂತಾದ ಹಲವಾರು ಪಟ್ಟಣಗಳಿಗೆ ಪ್ರತಿನಿತ್ಯ ಸಾವಿರಾರು ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸದ ಸಲುವಾಗಿ ಹಾಗೂ ಸಾರ್ವಜನಿಕರು ತಮ್ಮ ಕೆಲಸದ ನಿಮಿತ್ತ ಪ್ರಯಾಣ ಮಾಡುತ್ತಿದ್ದು, ಸರಿಯಾದ ಬಸ್ ಸಂಚಾರ ಸೌಕರ್ಯ ಇಲ್ಲದೆ ತೊಂದರೆ ಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಲಿಂಗಸುಗೂರು ತಾಲ್ಲೂಕಿನ ಹಟ್ಟಿ ಪಟ್ಟಣದ ಬಸ್ ನಿಲ್ದಾಣದಿಂದ ತಾಲ್ಲೂಕು ಸ್ಥಳಗಳಿಗೆ ಒಟ್ಟು 143 ಆಗಮನ/ನಿರ್ಗಮನಗಳು ಕಾರ್ಯಾಚರಣೆಯಲ್ಲಿರುತ್ತವೆ.<br><br>ಹಟ್ಟಿ ಪಟ್ಟಣದ ಸಾರ್ವಜನಿಕ ಪ್ರಯಾಣಿಕರು ಹಾಗೂ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಲಿಂಗಸುಗೂರು ಘಟಕದಿಂದ ಹುಬ್ಬಳ್ಳಿ ಮತ್ತು ಧಾರವಾಡಕ್ಕೆ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದ್ದು, ವಿವರ ಕೆಳಕಂಡಂತಿದೆ:<br><br>ಕ್ರ.ಸಂ / ಮಾರ್ಗ / ಸಾರಿಗೆ ವರ್ಗ / ಹಟ್ಟಿ ನಿರ್ಗಮನ ಸಮಯ<br>01 / ಹಟ್ಟಿ-ಧಾರವಾಡ / ವೇಗದೂತ / 06:15<br>02 / ಹಟ್ಟಿ-ಹುಬ್ಬಳ್ಳಿ / ವೇಗದೂತ / 07:15<br><br>ಹಟ್ಟಿಯಿಂದ ಲಿಂಗಸುಗೂರು 22 ಕಿ.ಮೀ ಅಂತರದಲ್ಲಿದ್ದು, ಹಟ್ಟಿಯಿಂದ ಲಿಂಗಸುಗೂರಿಗೆ ಪ್ರತಿ ದಿನ 64 ಸುತ್ತುವಳಿಗಳು ಕಾರ್ಯಾಚರಣೆ ಇರುತ್ತವೆ. ಲಿಂಗಸುಗೂರಿನಿಂದ ಹುಬ್ಬಳ್ಳಿ ಧಾರವಾಡಕ್ಕೆ 02 ಪ್ರತಿಷ್ಠಿತ ಸಾರಿಗೆಗಳು, 14 ವೇಗದೂತ ಸಾರಿಗೆಗಳು ಕಾರ್ಯಾಚರಣೆಯಲ್ಲಿದ್ದು, ವಿವರಗಳನ್ನು **ಅನುಬಂಧ**ದಲ್ಲಿ ಲಗತ್ತಿಸಿದೆ. ಅಲ್ಲದೇ, ಲಿಂಗಸುಗೂರು ಬಸ್ ನಿಲ್ದಾಣದಿಂದ ವಿವಿಧ ತಾಲ್ಲೂಕು/ಜಿಲ್ಲೆ/ಸ್ಥಳಗಳಿಗೆ ಒಟ್ಟು 799 ಆಗಮನ/ನಿರ್ಗಮನಗಳು ಕಾರ್ಯಾಚರಣೆಯಲ್ಲಿವೆ.<br><br>ಪ್ರಸ್ತುತ ಸಾರ್ವಜನಿಕರ ಬೇಡಿಕೆ/ಅವಶ್ಯಕತೆಗನುಗುಣವಾಗಿ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ. ಸದರಿ ಸಾರಿಗೆಗಳ ಪ್ರಯೋಜನವನ್ನು ಈ ಭಾಗದ ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳು ಪಡೆದುಕೊಳ್ಳುತ್ತಿರುತ್ತಾರೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಆ. | ಬಂದಿದ್ದಲ್ಲಿ, ಹಟ್ಟಿ ಪಟ್ಟಣಕ್ಕೆ ಬಸ್ ಡಿಪೋ ಮತ್ತು ಕಟ್ಟಡ ಮಂಜೂರು ಮಾಡಿ ಅದು ಕಾರ್ಯಾರಂಭ ಮಾಡಲು ಇದುವರೆವಿಗೂ ಸರ್ಕಾರ ಅಗತ್ಯ ಕ್ರಮ ವಹಿಸದಿರಲು ಕಾರಣಗಳೇನು; ಯಾವ ಕಾಲಮಿತಿಯೊಳಗೆ ಬಸ ಡಿಪೋ ಮತ್ತು ಕಟ್ಟಡ ಮಂಜೂರು ಮಾಡಿ ಕಾರ್ಯಾರಂಭ ಮಾಡಲು ಈ ಬಗ್ಗೆ ಸರ್ಕಾರ ಅಗತ್ಯ ಕ್ರಮ ವಹಿಸುವುದು? | ನಿಗಮದ ನಿಯಮಗಳನ್ವಯ ಬಸ್ ಘಟಕಗಳನ್ನು ತಾಲ್ಲೂಕು ಕೇಂದ್ರದಲ್ಲಿ ಮಾತ್ರ ನಿರ್ಮಿಸಲು ಅವಕಾಶ ಇರುತ್ತದೆ. ಹಟ್ಟಿ ಪಟ್ಟಣ ಹೋಬಳಿಯಾಗಿರುವುದರಿಂದ ಬಸ್ ಘಟಕ ನಿರ್ಮಾಣ ಮಾಡಲು ಅವಕಾಶ ಇರುವುದಿಲ್ಲ. |

**ಸಂಖ್ಯೆ: ಟಿಡಿ 246 ಟಿಸಿಕ್ಯೂ 2024**

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು

ಅನುಬಂಧ-"ಅ"

## ಲಿಂಗಸುಗೂರು ನಿಂದ ಹುಬ್ಬಳ್ಳಿ ಮತ್ತು ಧಾರವಾಡಕ್ಕೆ ಕಾರ್ಯಾಚರಣೆಯಾಗುತ್ತಿರುವ ಸಾರಿಗೆಗಳ ವಿವರ

| ಕ್ರ.ಸಂ | ಘಟಕ | ಮಾರ್ಗ | | ಸಾರಿಗೆ ವರ್ಗ | ನಿರ್ಗಮನ ವೇಳೆ |
|---|---|---|---|---|---|
| | | ಎಲ್ಲಿಂದ | ಎಲ್ಲಿಗೆ | | |
| 1 | ಯಾದಗಿರಿ | ಯಾದಗಿರಿ | ಧಾರವಾಡ | ನಾನ್ ಎಸಿ ಸ್ಲೀಪರ್ | 23:45 |
| 2 | ಹುಬ್ಬಳ್ಳಿ | ಕಲಬುರಗಿ | ಹುಬ್ಬಳ್ಳಿ | ನಾನ್ ಎಸಿ ಸ್ಲೀಪರ್ | 01:00 |
| 3 | ಲಿಂಗಸುಗೂರು | ಲಿಂಗಸುಗೂರು | ಹುಬ್ಬಳ್ಳಿ | ವೇಗದೂತ | 06:00 |
| 4 | ಲಿಂಗಸುಗೂರು | ಲಿಂಗಸುಗೂರು | ಹುಬ್ಬಳ್ಳಿ | ವೇಗದೂತ | 06:45 |
| 5 | ಲಿಂಗಸುಗೂರು | ಅಂಕಲಿಮಠ | ಹುಬ್ಬಳ್ಳಿ | ವೇಗದೂತ | 07:15 |
| 6 | ಲಿಂಗಸುಗೂರು | ಲಿಂಗಸುಗೂರು | ಕಾರವಾರ | ವೇಗದೂತ | 09:15 |
| 7 | ಯಾದಗಿರಿ | ಯಾದಗಿರಿ | ಹುಬ್ಬಳ್ಳಿ | ವೇಗದೂತ | 09:45 |
| 8 | ಕಲಬುರಗಿ | ಕಲಬುರಗಿ | ಹುಬ್ಬಳ್ಳಿ | ವೇಗದೂತ | 11:00 |
| 9 | ಕಲಬುರಗಿ | ಕಲಬುರಗಿ | ಮಂಗಳೂರು | ವೇಗದೂತ | 14:15 |
| 10 | ರಾಯಚೂರು | ರಾಯಚೂರು | ಮಂಗಳೂರು | ವೇಗದೂತ | 15:00 |
| 11 | ಲಿಂಗಸುಗೂರು | ರಾಯಚೂರು | ಹುಬ್ಬಳ್ಳಿ | ವೇಗದೂತ | 16:30 |
| 12 | ದೇವದುರ್ಗ | ದೇವದುರ್ಗ | ಧಾರವಾಡ | ವೇಗದೂತ | 20:00 |
| 13 | ಸೇಡಂ | ಸೇಡಂ | ದಾಂಡೇಲಿ | ವೇಗದೂತ | 20:30 |
| 14 | ಅಫಜಲಪುರ | ಅಫಜಲಪುರ | ಧಾರವಾಡ | ವೇಗದೂತ | 21:30 |
| 15 | ಚಿಂಚೋಳಿ | ಚಿಂಚೋಳಿ | ಧಾರವಾಡ | ವೇಗದೂತ | 22:30 |
| 16 | ಕಾರವಾರ | ಕಲಬುರಗಿ | ಕಾರವಾರ | ವೇಗದೂತ | 23:00 |